# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕೆ.ಎಸ್.ಕೃಷ್ಣಾಚಾರ್, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ವಿರುದ್ಧ ಲೋಕಾಯುಕ್ತ ಪ್ರಕರಣದ – ತಿದ್ದುಪಡಿ ಆದೇಶ ಹೊರಡಿಸುವ ಕುರಿತು – ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/762/ಗ್ರಾಪಂಕಾ/2017, ದಿನಾಂಕ:06–04–2018.
2. ಶ್ರೀ ಕೆ.ಎಸ್.ಕೃಷ್ಣಾಚಾರ್, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ಮನವಿ ಸಂಖ್ಯೆ:23839, ದಿನಾಂಕ:18–06–2018
3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ/762/ಗ್ರಾಪಂಕಾ/2017 ದಿನಾಂಕ:29.08.2018
4. ಮಾನ್ಯ ನಿಬಂಧಕರು, ವಿಚಾರಣೆಗಳು–07 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ತಿದ್ದುಪಡಿ ಶಿಫಾರಸ್ಸು ಸಂಖ್ಯೆ:LOK/INQ/14-A/310/2012/ARE-7, ದಿನಾಂಕ: 11–09–2018.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ.ಎಸ್.ಕೃಷ್ಣಾಚಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ರವರಿಗೆ ಲೋಕಾಯುಕ್ತ ಶಿಫಾರಸ್ಸಿನಂತೆ "25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಿ ಆದೇಶಿಸಲಾಗಿತ್ತು. ಓದಲಾದ (2)ರ ಪತ್ರದಲ್ಲಿ ಶ್ರೀ ಕೆ.ಎಸ್.ಕೃಷ್ಣಾಚಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ಮಹಾಲೇಖಪಾಲರು, ಬೆಂಗಳೂರು ರವರ ಕಛೇರಿಯಲ್ಲಿ ನಿವೃತ್ತಿ ವೇತನ ಕಡಿತ ವಿಲೇವಾರಿ ಬಗ್ಗೆ ವಿಚಾರಿಸಲಾಗಿ, ಲೋಕಾಯುಕ್ತರ ನಿರ್ದೇಶನದಂತೆ ನಿವೃತ್ತಿ ಉಪದಾನ(ಡಿಸಿಆರ್‌ಜಿ), ಕಮ್ಯೂಟೇಷನ್ ಮತ್ತು ನಿವೃತ್ತಿ ಉಪದಾನದಲ್ಲಿ 25% ಕಡಿತಗೊಳಿಸುವುದಾಗಿ ತಿಳಿಸಿರುವುದರಿಂದ ಈ ಬಗ್ಗೆ ಮಹಾಲೇಖಪಾಲರು, ಬೆಂಗಳೂರು ರವರಿಗೆ ಸ್ಪಷ್ಟ ನಿರ್ದೇಶನ ನೀಡುವಂತೆ ಕೋರಿರುತ್ತಾರೆ. ಅದರಂತೆ ನಿಬಂಧಕರು, ವಿಚಾರಣೆಗಳು–7, ಮಾನ್ಯ ಉಪಲೋಕಾಯುಕ್ತ, ಬೆಂಗಳೂರು ರವರಿಗೆ ಓದಲಾದ (3) ರ ಸರ್ಕಾರದ ಪತ್ರದಲ್ಲಿ ಸ್ಪಷ್ಟೀಕರಣ ಕೋರಲಾಗಿತ್ತು. ಓದಲಾದ (4)ರ ತಿದ್ದುಪಡಿ ಶಿಫಾರಸ್ಸಿನಲ್ಲಿ ಉಪಲೋಕಾಯುಕ್ತ–1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಶ್ರೀ ಕೆ.ಎಸ್.ಕೃಷ್ಣಾಚಾರ್, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯಿತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ, ರವರಿಗೆ "25% ನಿವೃತ್ತಿ ವೇತನವನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆಯನ್ನು ವಿಧಿಸಿರುವುದಾಗಿ ಆದೇಶಿಸಿರುತ್ತಾರೆ.

ಆದುದರಿಂದ ಸರ್ಕಾರವು ತಿದ್ದುಪಡಿ ವರದಿಯನ್ನು ಪರಿಶೀಲಿಸಿ ಶ್ರೀ ಕೆ.ಎಸ್.ಕೃಷ್ಣಾಚಾರ್, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇವರಿಗೆ "25% ನಿವೃತ್ತಿ ವೇತನವನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/762/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:23-11-2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಕೆ.ಎಸ್.ಕೃಷ್ಣಾಚಾರ್, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214 (1)(ಎ) ಅನುಸಾರ "25% ನಿವೃತ್ತಿ ವೇತನವನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

23/11/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಅಪರ ನಿಬಂಧಕರು, ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ಜಿಲ್ಲೆ.
6) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾಂಡವಪುರ, ಮಂಡ್ಯ ಜಿಲ್ಲೆ.
7) ಶ್ರೀ ಕೆ.ಎಸ್.ಕೃಷ್ಣಾಚಾರ್, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡಿಂಕಾ ಗ್ರಾಮ ಪಂಚಾಯತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ
8) ಗಣಕ ಕೋಶ
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.